ಗಳನ್ನು ಮೀರಿ ನಿಂತು, ನಮ್ಮ ಧಾರ್ಮಿಕ ಭಾವನೆಗಳನ್ನು ನಮ್ಮ ಪರಂಪರೆಯ ದೃಷ್ಟಿಕೋನದಿಂದಲೇ ನೋಡಲು ಸಾಧ್ಯವಾಗಬೇಕು. ಆಗ ಮಾತ್ರ ಅವತಾರ ತತ್ತ್ವ ಹಾಗೂ ಲೀಲಾವಿಚಾರ ಸರಿಯಾದ ರೀತಿಯಲ್ಲಿ ಅರ್ಥವಾಗುವುದು. ಆಗ ಎಲ್ಲ ಸಂದೇಹಗಳ ನಿವಾರಣೆಯಾಗುವುದು.

ಭಾರತದಲ್ಲಿ ಧರ್ಮ, ದೇವರು, ಅಧ್ಯಾತ್ಮ ಇವುಗಳಿಗೆ ಆಧಾರ, ಇಲ್ಲಿ ಹಲವು ಮಂದಿ ಮಹಾಪುರುಷರ ಜನನ ಬಹಳ ಪ್ರಾಚೀನ ಕಾಲದಿಂದಲೇ ಉಂಟಾಗಿರುವುದು. ಅವರು ತಮ್ಮ ಆಧ್ಯಾತ್ಮಿಕ ಅನುಭವದಿಂದಲೂ, ತಮ್ಮ ದಿವ್ಯ ಜೀವನದಿಂದಲೂ ಜಗತ್ತಿಗೆ ಭಗವಂತನ ಅಸ್ತಿತ್ವವನ್ನು ತಿಳಿಸಿಕೊಟ್ಟರು, ಅವನನ್ನು ಹೊಂದುವ ಮಾರ್ಗವನ್ನು ತೋರಿಸಿಕೊಟ್ಟರು. ವೇದಕಾಲದ ಋಷಿಗಳು, ಪುರಾಣದಲ್ಲಿ ಬರುವ ದೇವದೇವತೆಗಳು, ಉಪನಿಷತ್ತುಗಳಲ್ಲಿನ ಬ್ರಹ್ಮವಾದಿಗಳು, ಮುಂದೆ ಇಡೀ ಭಾರತವನ್ನೇ ಬೆಳಗಿದ ಶ್ರೀರಾಮ, ಶ್ರೀಕೃಷ್ಣ, ಬುದ್ಧ, ಚೈತನ್ಯ ರಂಥವರು; ಇತ್ತೀಚೆಗೆ ಶ್ರೀರಾಮಕೃಷ್ಣ, ಶ್ರೀಮಾತೆ ಹಾಗೂ ಸ್ವಾಮಿ ವಿವೇಕಾನಂದರು – ಹೀಗೆ ಮಹಾಪುರುಷರ ಒಂದು ದೊಡ್ಡ ಪರಂಪರೆಯೇ ನಮ್ಮಲ್ಲಿದೆ. ಈ ಪ್ರಪಂಚದ ಅನುಭವವೇ ವಿಜ್ಞಾನಕ್ಕೆ ಆಧಾರವಾದರೆ, ಅಲೌಕಿಕ ಪ್ರಪಂಚದ ಆಧ್ಯಾತ್ಮಿಕ ಅನುಭವವೇ ಭಗವಂತನ ಅಸ್ತಿತ್ವಕ್ಕೆ ಆಧಾರವೆಂದು ಈ ಮಹಾಪುರುಷರೆಲ್ಲ ಸಾರಿದರು; ತಮ್ಮ ಅನುಭವದ ಆಧಾರದಿಂದ ಅದನ್ನು ಇತರರಿಗೂ ತೋರಿಸಿಕೊಟ್ಟರು.

ಶ್ರೀರಾಮಕೃಷ್ಣರ ಹಾಗೂ ಸ್ವಾಮಿ ವಿವೇಕಾನಂದರ ಕಾಲದಲ್ಲಿ ವೈಜ್ಞಾನಿಕ ಪ್ರಗತಿ ಸಾಕಷ್ಟು ಆಗಿದ್ದುದರಿಂದ, ನಮ್ಮ ಧರ್ಮ, ಅಧ್ಯಾತ್ಮ, ಅವತಾರ ತತ್ತ್ವಗಳನ್ನು ತೀಕ್ಷ್ಣ ವಿಮರ್ಶೆಯ ಒರೆಗಲ್ಲಿಗೆ ಹಚ್ಚಿ ಅಳೆಯುವ ಸುಯೋಗ ತಾನಾಗಿ ಒದಗಿಬಂತು. ವೇದಾಂತ ಹಾಗೂ ಭಾರತೀಯ ಸನಾತನ ತತ್ತ್ವ ಈ ಪರೀಕ್ಷೆಯಲ್ಲಿ ಅದ್ಭುತವಾಗಿ ಉಳಿದುಕೊಂಡದ್ದಲ್ಲದೆ, ಅವುಗಳು ಎಲ್ಲವನ್ನೂ ಮೀರಿ ಅಸಾಧಾರಣವಾಗಿ ಬೆಳಗಿದವು. ಈ ಮಹಾತ್ಮರ ದಿವ್ಯ ಜೀವನದ ಬೆಳಕಿನಲ್ಲಿ ನಮ್ಮ ಪರಂಪರೆ, ಧರ್ಮ, ಶಾಸ್ತ್ರಗಳನ್ನು ನೋಡುವ ಹೊಸ ನೋಟ ಬೆಳೆದುಕೊಂಡು ಬಂತು. ಈ ಹಿನ್ನೆಲೆಯಲ್ಲಿ , ಅವತಾರ ಪುರುಷರ ಜೀವನವನ್ನು ಆಧುನಿಕವಾಗಿಯೂ, ವೈಜ್ಞಾನಿಕವಾಗಿಯೂ ನೋಡುವುದು ಸಾಧ್ಯವೆಂಬುದು ಮನದಟ್ಟಾಗುತ್ತದೆ. ಸತ್ಯವನ್ನು ಸ್ವೀಕರಿಸಲು ಅಗತ್ಯವಾಗಿ ಇರಬೇಕಾದುದು ಕೇವಲ ವೈಚಾರಿಕತೆಯಲ್ಲ, ಅಥವಾ ಪರೀಕ್ಷಣಾವಿಧಾನಗಳ ಸೂಕ್ಷ್ಮತೆಯಲ್ಲ; ಸತ್ಯವೆನ್ನುವುದರಲ್ಲಿ ಅಚಲವಾದ ನಿಷ್ಠೆ ಮಾತ್ರ. ಜಗತ್ತು ಆಧುನಿಕವಾಗಿರಲಿ, ಮನೋಧರ್ಮವು ನೂತನವಾಗಿರಲಿ; ಪ್ರಾಮಾಣಿಕ ವಿವೇಚನೆಯೊಂದಿದ್ದರೆ ಈ ಭೌತಿಕ ಜಗತ್ತಿನ ಹಿಂದಿರುವ ಆಧ್ಯಾತ್ಮಿಕ ಸತ್ಯವನ್ನು ಅರಿಯುವುದು ಕಷ್ಟವಲ್ಲ.

ಅವತಾರ ಪುರುಷರ ಅಸಾಧಾರಣ ಜೀವನವನ್ನು ಹೊಸ ಬಗೆಯಲ್ಲಿ ಅರಿತುಕೊಳ್ಳುವುದರಿಂದ ಒಂದು ವಿಶೇಷ ಲಾಭವಿದೆ. ಅದು ನಮ್ಮ ಸಾಧನೆಗೆ ಒಂದು ಹೊಸ ದಿಕ್ಕನ್ನು ತೋರಿಸಿಕೊಡುವುದು. ಅವತಾರ ಪುರುಷರು ಬಂದು ಹೋದ ಮೇಲೂ ಅವರ ಪ್ರಭಾವ ಸಾವಿರಾರು ವರ್ಷ ಕೆಲಸ ಮಾಡುತ್ತದೆ ಎಂಬ ಮಾತಿಗೆ ವಿಶೇಷ ಅರ್ಥವಿದೆ. ಕೇವಲ ಭೌತಿಕ ಶರೀರವಿದ್ದಾಗ ಮಾತ್ರ ಅವರು ಅಸ್ತಿತ್ವ ಹೊಂದಿದ್ದಾರೆ ಎಂದು ತಿಳಿಯಬಾರದು; ಅನಂತರ ಅನೇಕ ಕಾಲ ಅವರು ಸೂಕ್ಷ್ಮರೂಪದಲ್ಲಿ ನೆಲೆಸಿರುತ್ತಾರೆ (ಕೇವಲ ಸಾಂಕೇತಿಕ ಅರ್ಥದಿಂದ ಮಾತ್ರವಲ್ಲ; ನೈಜವಾಗಿ ಕೂಡ) ಎಂದು ತಿಳಿಯಬೇಕು. ಈ ಭಾವನೆ ನಮ್ಮ ನಂಬಿಕೆ, ಶ್ರದ್ಧೆ, ಭಕ್ತಿಗಳನ್ನು ದೃಢಗೊಳಿಸುವುದು; ನಮ್ಮ ಸಾಧನೆ, ಪ್ರಾರ್ಥನೆ ಹೆಚ್ಚು ಫಲಪ್ರದವೂ ಪರಿಣಾಮಕಾರಿಯೂ ಆಗುವಂತೆ ಮಾಡುವುದು. 'ನಾನು ಕಣ್ಣು ಮುಚ್ಚಿ ಪ್ರಾರ್ಥಿಸುವಾಗ ಭಗವಂತ ನನ್ನ ಮುಂದೆ ಸೂಕ್ಷ್ಮರೂಪದಲ್ಲಿ ಕುಳಿತು ಕೇಳುತ್ತಾನೆ' ಎಂಬ ದೃಢವಾದ ನಂಬಿಕೆ, ನಮ್ಮ ಪ್ರಾರ್ಥನೆಗೆ ಅದೆಂಥ ಬಲ ನೀಡುವುದು! ಈ ನಂಬಿಕೆ ಕ್ರಮೇಣ ಹೆಪ್ಪುಗಟ್ಟುತ್ತ, ಭಗವತ್ಕೃಪೆ ನಮ್ಮತ್ತ ಹರಿಯತೊಡಗಿ, ಕ್ರಮೇಣ ಭಗವಂತನ ಸೂಕ್ಷ್ಮರೂಪ ಸಾಕಾರವಾಗಿ ಅನುಭವಕ್ಕೆ ಬರಬೇಕು; ಆಗಲೇ ಸಾಧನೆ ಪೂರ್ಣಗೊಳ್ಳುವುದು. ಅಲ್ಲಿಯವರೆಗೂ ಸಾಧಕ ತನ್ನ ಭಕ್ತಿ, ಪ್ರಾರ್ಥನೆ, ಲೀಲಾಚಿಂತನೆಗಳಲ್ಲೇ ಮುಂದುವರಿಯಬೇಕು.

## ವಿಹಂಗಮ ನೋಟ

ಜಗತ್ತಿನ ವ್ಯಾಪಾರದಲ್ಲಿ ಸತತವೂ ಮಗ್ನವಾಗಿರುವ ನಮಗೆ, ಅದರಿಂದ ದೂರ ನಿಂತು ಎಲ್ಲವನ್ನೂ ದಿಟ್ಟಿಸಿ ನೋಡುವ ನೋಟ ಸಾಮಾನ್ಯವಾಗಿ ಲಭಿಸುವುದಿಲ್ಲ. ಆದರೆ ನೋಟವೆಂಬುದು ಮಾನಸಿಕ ಕ್ರಿಯೆಯನ್ನೂ ಒಳಗೊಳ್ಳುವುದರಿಂದ ಕೇವಲ ಅಲ್ಪ ಪ್ರಯತ್ನದಿಂದಲೇ ಅಂತಹ ವಿಹಂಗಮ ನೋಟವನ್ನು ನೋಡಲು ಪ್ರಯತ್ನಿಸಬಹುದು. ಪ್ರಪಂಚದಲ್ಲಿ ನಾವು ಒಂದಾಗದೆ, ಇಡೀ ಜಗತ್ತು ನಮಗಿಂತ ಪ್ರತ್ಯೇಕವೆಂಬಂತೆ ನೋಡಬೇಕು. ಅಲ್ಲಿ ಭೂಮಿ, ಆಕಾಶ, ಸಾಗರ, ನದಿ, ಅರಣ್ಯಗಳಿವೆ; ಸಹಸ್ರಾರು ಜೀವಿ ಜಂತುಗಳಿವೆ; ಸಸ್ಯ ಕ್ರಿಮಿ ಕೀಟಾದಿಗಳಿವೆ. ಮನುಷ್ಯರೂ ಪ್ರಾಣಿಗಳೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಇಡೀ ಪ್ರಪಂಚದ ಆಗುಹೋಗುಗಳೆಲ್ಲವೂ ದೇವರ ಇಚ್ಛೆಯಿಂದಲೇ ನಡೆಯುತ್ತಿವೆ. ಕೊನೆಗೆ ಎಲ್ಲವೂ ಲಯವಾಗುವುದೂ ಅವನಲ್ಲೇ. ದೇವರು ಈ ಎಲ್ಲ ವಸ್ತು ವಿಷಯಗಳ, ಜೀವ–ಚೈತನ್ಯಗಳ ಒಳಗೂ ಹೊರಗೂ ಇದ್ದುಕೊಂಡು, ಎಲ್ಲವನ್ನೂ ನಿಯಂತ್ರಿಸುತ್ತಾನೆ.ಅವೆಲ್ಲವುಗಳ ಅನುಭವವನ್ನು ತಾನೂ ಪಡೆಯುತ್ತಾನೆ, ಆ ಮೂಲಕ ತನ್ನ ಲೀಲೆಯನ್ನು ನಡೆಸುತ್ತಾನೆ. ಎಲ್ಲಿ ಅಸಮತೋಲನ, ಗೊಂದಲ, ಸಂಘರ್ಷಗಳುಂಟಾಗುವವೋ, ಅಲ್ಲಿ ಭಗವಂತ ತಾನೇ ದೇಹಧಾರಿಯಾಗುತ್ತಾನೆ, ಜಗಲ್ಲೀಲೆಯಲ್ಲಿ ನಾಯಕನಂತೆ ಆಟವಾಡುತ್ತಾನೆ. ಅವನು ಜಗತ್ತಿನ ಗತಿಯನ್ನೇ ಬದಲಿಸಿ, ಕೆಲವರಿಗೆ ಮಾತ್ರ ತನ್ನ ನೈಜ ಸ್ವರೂಪವನ್ನು ವ್ಯಕ್ತಪಡಿಸುತ್ತಾನೆ. ಇದನ್ನೆಲ್ಲ ಚಿಂತಿಸುತ್ತ, ಅವತಾರಗಳ ಜೀವನವನ್ನೇ ಅವಲೋಕಿಸುತ್ತ 'ಲೀಲಾಚಿಂತನೆ' ನಡೆಸಬೇಕು. ಆಗ ಶ್ರೀಕೃಷ್ಣನ ಲೀಲೆ, ಶ್ರೀರಾಮನ ದಿವ್ಯಜೀವನ, ಬುದ್ಧನ ವೈರಾಗ್ಯ–ನಿರ್ವಾಣ, ಚೈತನ್ಯ ಮಹಾಪ್ರಭುವಿನ ದಿವ್ಯನರ್ತನ, ಶ್ರೀರಾಮಕೃಷ್ಣರ ನಿರ್ವಿಕಲ್ಪ ಸಮಾಧಿ – ಇವೆಲ್ಲವೂ ಜೀವಂತವಾಗಿ ನಮ್ಮ ಮುಂದೆ ಮೂಡಿ ನಿಲ್ಲುವುವು. ಕಥೆಯಾಗಿ, ಪುರಾಣವಾಗಿ ರಂಜಿಸುವ ಮಹಾ ವ್ಯಕ್ತಿತ್ವಗಳು ನಮ್ಮ ಕೈ ಹಿಡಿದು ಮುನ್ನಡೆಸುವ ಗುರುವಾಗಿ ಮೈದಳೆಯುತ್ತಾರೆ; ಸಾಧನೆಯ ಫಲವಾಗಿ ಅಂತರಂಗದ ದರ್ಶನವಾಗುತ್ತಾರೆ.